ಪಿಡಬ್ಲ್ಯೂ- 01
ದಿನಾಂಕಃ 02.03.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ **1** ಮತ್ತು **3** ನೇ ಪ್ರತಿವಾದಿ ಪರ ಶ್ರೀ. ವಿ ಆರ್ ಎ ವಕೀಲರಿಂದ</u>

ಈ ದಾವೆಯಲ್ಲಿ 3 ದಾವಾ ಆಸ್ತಿಗಳು ಇರುತ್ತವೆ. ಅವುಗಳ ಸಂಖ್ಯೆ ಸರ್ವೆ ನಂ.31 ಎಲ್ಲರೂ ಕೂಡಿ ಖರೀದಿ ಹಿಡಿದ ಆಸ್ತಿ, ಸರ್ವೆ ನಂ.1 ಹಿರಿಯರ ಆಸ್ತಿ, ಇನ್ನೊಂದು ಸರ್ವೆ ನಂ.123, 124 ಅವು ಹಿರಿಯರ ಆಸ್ತಿ ಇರುತ್ತವೆ. ಇಷ್ಟು ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ. ಸದರಿ ಆಸ್ತಿಗಳ ಚಕಬಂದಿ ಹೇಳಲು ಬರುತ್ತದೆ. ಸರ್ವೆ ನಂ.1 ರ ಪೂರ್ವಕ್ಕೆ ಬಸವರಾಜ ಇವರ ಆಸ್ತಿ ಇರುತ್ತದೆ. ಪಶ್ಚಿಮಕ್ಕೆ ಹೊಸ ಹಲಸೂರು ಗ್ರಾಮದ ಪ್ಲಾಟು ಇರುತ್ತದೆ. ಉತ್ತರಕ್ಕೆ ನದಾಫ ಇವರ ಜಮೀನು ಇರುತ್ತದೆ. ದಕ್ಷಿಣಕ್ಕೆ ವಾಲೀಕಾರ ಜಮೀನು ಇರುತ್ತದೆ. ಸರ್ವೆ ನಂ.31 ರ ಪೂರ್ವಕ್ಕೆ ಪಿ ಬಿ ರಸ್ತೆ, ಪಶ್ಚಿಮಕ್ಕೆ ಸವೂರು ದಾರಿ, ಉತ್ತರಕ್ಕೆ ನದಾಫ ಇವರ ಆಸ್ತಿ, ದಕ್ಷಿಣಕ್ಕೆ ನಾಯಕ ಅವರ ಹೊಲ ಇರುತ್ತವೆ. ಸರ್ವೆ ನಂ.123, 124 ಇದರ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಚಪ್ಪರದ ಇವರ ಹೊಲ, ಉತ್ತರಕ್ಕೆ ಪಿಂಜಾರ ಇವರ ಹೊಲ, ದಕ್ಷಿಣಕ್ಕೆ ಮಂತ್ರೊಡಿ ಇವರ ಹೊಲ ಇರುತ್ತವೆ. ಈ ದಾವೆ ಹೂಡುವಾಗ ಚಕಬಂದಿ ಹೇಳಿ ಬರೆಸಿದ್ದೇನೆ. ನಾನು ಈಗ ಹೇಳಿದ ಚಕಬಂದಿ ನಾನು ಹೇಳಿ ಬರೆಸಿಲ್ಲ ಮತ್ತು ಆ ಚಕಬಂದಿ ನಡುವೆ ಸದರಿ ಹೊಲಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ನಾವು ನಾಲ್ಕು ಜನ ಹೆಣ್ಣು ಮಕ್ಕಳು, ನಾಲ್ಕು ಜನ ಗಂಡು ಮಕ್ಕಳು. ನಾಲ್ಕು ಜನರ ಹೆಣ್ಣು ಮಕ್ಕಳ ಹೆಸರು 1.ಶಾಂತವ್ವ, 2.ದ್ಯಾಮವ್ವ, 3. ಪಾರವ್ವ, 4. ಶಿವಕ್ಕ. ಅವರಲ್ಲಿ ಇಬ್ಬರು ದ್ಯಾಮವ್ವ ಮತ್ತು ಶಾಂತವ್ವ ತೀರಿಕೊಂಡಿರುತ್ತಾರೆ. ಪಾರವ್ವ ಮತ್ತು ಶಿವಕ್ಕ ಅವರ ಗಂಡನ ಮನೆಯಲ್ಲಿ ಇರುತ್ತಾರೆ. ಈ ದಾವೆ ಹೂಡುವಾಗ ನಮ್ಮ ವಕೀಲರಿಗೆ ನಾಲ್ಕು ಜನ ಸಹೋದರಿಯರು ಇರುತ್ತಾರೆ ಅಂತಾ ಹೇಳಿ ಬರೆಸಿದ್ದೇನೆ. ನಾವು ಆ ರೀತಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರಿಯರನ್ನು ಈ ದಾವೆಯಲ್ಲಿ ಕಕ್ಷಿಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ತೀರಿಕೊಂಡ ಸಹೋದರಿಯರ ವಾರಸುದಾರರನ್ನು ಈ ದಾವೆಯಲ್ಲಿ ಕಕ್ಷಿಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು 1980 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿ ಹೆಸರು ಬಸವ್ವ ಉರ್ಫ ಬಸಮ್ಮ. ವಂಶಾವಳಿಯಲ್ಲಿ ತಾಯಿ ಹೆಸರು ತೋರಿಸಿಲ್ಲ ಎಂದರೆ ತೀರಿಕೊಂಡಿರುತ್ತಾರೆ ಆದ್ದರಿಂದ ತೋರಿಸಿಲ್ಲ. ನನ್ನ ತಂದೆ ತೀರಿಕೊಂಡ ನಂತರ ನಾನು ಹಿರೇತನ ಮಾಡಿಲ್ಲ ನನ್ನ ಅಣ್ಣ ಕರಿವೀರಪ್ಪ ಹಿರೇತನ ಮಾಡುತ್ತಿದ್ದ. ನನ್ನ ಅಣ್ಣ

ಕರಿವೀರಪ್ಪ ಹಿರೇತನ ಮಾಡುತ್ತಿದ್ದ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಹಿರೇತನ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಯಾವ ಆಸ್ತಿಗಳು ಯಾರ ಹೆಸರಿನಲ್ಲಿರುತ್ತವೆ ಅಂತಾ ಹೇಳಲು ಬರುತ್ತದೆ. ಎಲ್ಲಾ ಆಸ್ತಿಗಳು ನನ್ನ ಮತ್ತು ನನ್ನ ಮೂರು ಜನರ ಸಹೋದರರ ಹೆಸರಿನಲ್ಲಿ ಜಂಟಿಯಾಗಿರುತ್ತವೆ. ನನಗೆ ಇಬ್ಬರು ಮಕ್ಕಳು. ಅವರ ಹೆಸರು 1.ಬಸವರಾಜಪ್ಪ ಮತ್ತು 2.ಈರಪ್ಪ. ನಾನು ಅವರ ಹೆಸರಿನಲ್ಲಿ ಹೊಲ ಮಾಡಿಲ್ಲ. ನಾನು ನಮ್ಮ ಸಹೋದರರ ಜೊತೆ ಹಿಸ್ಸೆ ದಿಸ್ಸೆ ಮಾಡಿಕೊಂಡು ನನಗೆ ಬಂದ ಜಮೀನನ್ನು ನನ್ನ ಮಕ್ಕಳಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆದರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಮನೆಯ ಆಸ್ತಿಯನ್ನು ಸೇರಿಸಿಲ್ಲ. ನಮ್ಮ ಮನೆಯ ಪೂರ್ವದ ಕಡೆ ಪ್ರತಿವಾದಿಯರಿಗೆ ಆಸ್ತಿ ಬಂದಿರುತ್ತದೆ ಎಂದರೆ ಸರಿಯಲ್ಲ ನನಗೆ ಯಾವುದೇ ಆಸ್ತಿ ಕೊಟ್ಟಿಲ್ಲ. ನಮ್ಮ ಮತ್ತು ಅವರ ನಡುವೆ ಸಾಮೂಹಿಕ ದಾರಿ ಇರುತ್ತದೆ ಎಂದರೆ ಸರಿಯಲ್ಲ. ಹಿಸ್ಸೆ ದಿಸ್ಸೆ ಮಾಡಿಕೊಂಡರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.123/2 ಎ, ಕ್ಷೇತ್ರ 3 ಎಕರೆ 8 ಗುಂಟೆ ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ ಅದನ್ನು ನಾನೇ ಉಳುಮೆ ಮಾಡುತ್ತೇನೆ ಎಂದರೆ ಸರಿ. ಸರ್ವೆ ನಂ.124/2 ರ ಪೈಕಿ 2 ಎಕರೆ 8 ಗುಂಟೆ ಜಮೀನನ್ನು ನಾನೇ ಉಳುಮೆ ಮಾಡುತ್ತೇನೆ ಎಂದರೆ ಸರಿ. ಸರ್ವೆ ನಂ.1 ಮತ್ತು 31 ರಲ್ಲಿ ನನಗೆ ಏನು ಕೊಟ್ಟಿಲ್ಲ. ನಾನು ನನ್ನ ಸಹೋದರರ ಜೊತೆ ಹಿಸ್ಸೆ ದಿಸ್ಸೆ ಮಾಡಿಕೊಂಡರೆ ಮಾತ್ರ ನನ್ನ ಮಕ್ಕಳಿಗೆ ಬಿಟ್ಟುಕೊಡಲು ಬರುತ್ತದೆ ಎಂದರೆ ಸರಿಯಲ್ಲ. ಉಪ ನೊಂದಣಾಧಿಕಾರಿ ಕಚೇರಿಯಲ್ಲಿ ನನ್ನ ಮಕ್ಕಳಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಿಃ 20.01.2016 ರಂದು ಮಕ್ಕಳಿಗೆ ಹಿಸ್ಸೆದಿಸ್ಸೆ ಮಾಡಿ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿ. ಬಸಪ್ಪ ನನ್ನ ಅಣ್ಣ. ಸರ್ವೆ ನಂ.1/ಬಿ/2, ಕ್ಷೇತ್ರ 3 ಎಕರೆ 31 ಗುಂಟೆ, 123/2/2 ರಲ್ಲಿ 3 ಎಕರೆ 8 ಗುಂಟೆ ಅವನ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ಆತನ ಹೆಸರು ಸದರಿ ದಾವಾ ಆಸ್ತಿಯ ಪಹಣಿಯಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲದಂತೆ ಮಾಡಿಕೊಂಡಿರುತ್ತಾನೆ. ಆತ ತೀರಿಕೊಂಡ ನಂತರ ಅವನ ಹೆಂಡತಿ ಮಕ್ಕಳ ಹೆಸರು ಬಂದಿರುತ್ತವೆ ಎಂದರೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ.124/6 ಕ್ಷೇತ್ರ 4 ಎಕರೆ 11 ಗುಂಟೆ ಮತ್ತು 123/2/3 ಕ್ಷೇತ್ರ 3 ಎಕರೆ 8 ಗುಂಟೆ ನನ್ನ ಸಹೋದರ ಸಣ್ಣಈರಪ್ಪನ ಹೆಸರಿಗೆ ಹೋಗಿರುತ್ತವೆ ಎಂದರೆ ಸರಿ. ಮನೆ ಸಹ ಆತನ ಹೆಸರಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಆತ ತೀರಿಕೊಂಡ ನಂತರ ಅವರ ಹೆಂಡತಿ ಮಕ್ಕಳ

ಹೆಸರು ಬಂದಿರುತ್ತವೆ ಎಂದರೆ ಸರಿಯಲ್ಲ. ಕಲವೀರಪ್ಪ ನನ್ನ ಹಿರಿಯ ಅಣ್ಣ. ಆತನಿಗೆ ಸರ್ವೆ ನಂ.1/1 ಬಿ/1 ಕ್ಷೇತ್ರ 3 ಎಕರೆ 31 ಗುಂಟೆ 17 ಆಣೆ, ಸರ್ವೆ ನಂ.123/2 ಕ್ಷೇತ್ರ 3 ಎಕರೆ 9 ಗುಂಟೆ ಇವು ಆತನಿಗೆ ಹೋಗಿರುತ್ತವೆ ಎಂದರೆ ಸರಿಯಲ್ಲ. ಆತ ನನಗೆ ಆಸ್ತಿ ಕೊಟ್ಟಿಲ್ಲ ಮೋಸ ಮಾಡಿರುತ್ತಾನೆ. ನಾವು ಪ್ರತಿವಾದಿಯರು ನೀಡಿದ ಕಚ್ಚಾ ನಕಾಶೆ ಪ್ರಕಾರ ವಹಿವಾಟು ಮಾಡುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಖಾತೆ ಆಗಿಲ್ಲ ಅಂತಾ ನುಡಿಯುತ್ತಾರೆ. ಆದರೆ ವಹಿವಾಟು ಮಾತ್ರ ಮಾಡುತ್ತೇವೆ . ಕಲವೀರಪ್ಪ ಉರ್ಫ ಶಂಕ್ರಪ್ಪ ಡಾವಣಗೆರೆಯಲ್ಲಿ ಎಫ್ ಡಿ ಸಿ ಅಂತಾ ಬಾಪುಜಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಆತನಿಗೆ ನಾಲ್ಕು ಜನ ಮಕ್ಕಳು ಎಂದರೆ ಸರಿ. ಸದರಿ ಕಲವೀರಪ್ಪನಿಗೆ ಸರ್ವೆ ನಂ.31/1 ನ್ನು ಕ್ಷೇತ್ರ 2 ಎಕರೆ 20 ಗುಂಟೆ ಜಮೀನನ್ನು ದಿಃ 15.07.1992 ರಂದು ಮತ್ತು ಸರ್ವೆ ನಂ.31/2 ನ್ನು ಕ್ಷೇತ್ರ 3 ಎಕರೆ 20 ಗುಂಟೆ ಜಮೀನನ್ನು ನಿಜಾಮುದ್ದಿನ ನದಾಫ ಅವರಿಂದ 42000/- ರೂಪಾಯಿಗೆ ಖರೀದಿ ಹಿಡಿದಿರುತ್ತಾರೆ ಎಂದರೆ ಎಲ್ಲರೂ ಕೂಡಿ, ಕೂಡಿ ಇದ್ದಾಗ ಹಿಡಿದಿರುತ್ತೇವೆ, ನಾವು ಬೇರೆಯಾದ ನಂತರ ಆತ ಖರೀದಿ ಹಿಡಿದಿರುತ್ತಾನೆ ಎಂದರೆ ಸರಿಯಲ್ಲ. ಆತ ಖರೀದಿ ಹಿಡಿದಿದ್ದಕ್ಕಾಗಿ ಅವು ಆತನ ಹಿಸ್ಸೆಗೆ ಹೋಗಿರುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂ.31/1 ಮತ್ತು 31/2 ಅವು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಾನು ಹಿಸ್ಸೆ ದಿಸ್ಸೆ ಮಾಡಿಕೊಂಡು ನನ್ನ ಮಕ್ಕಳಿಗೆ ಆಸ್ತಿಗಳನ್ನು ಕೊಟ್ಟಿದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯರ ನಡುವೆ ಹಿಸ್ಸೆ ದಿಸ್ಸೆ ಆಗಿ ಹೋಗಿರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.2 ಮತ್ತು 4 ಮತ್ತು ಜಿ ಎ ಎಸ್ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇದ್ದು ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಪ್ರತಿವಾದಿ ನಂ.5, 7 ರಿಂದ 13 ರವರನ್ನು ಕೂಗಿಸಲಾಗಿ ಗೈರು ಹಾಜರು ಇದ್ದು ಸಿ ಬಿ ಪಿ ವಕೀಲರು ಪಾಟೀ ಸವಾಲು ಇಲ್ಲ ಅಂತಾ ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.